**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ. ಟಿ ರವಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 998 |
| ಉತ್ತರಿಸಬೇಕಾದ ದಿನಾಂಕ | 25.08.2026 |
| ಉತ್ತರಿಸಬೇಕಾದ ಸಚಿವರು | ಮಾನ್ಯ ವಸತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಚಿಕ್ಕಮಗಳೂರು ನಗರಸಭೆಯ ವ್ಯಾಪ್ತಿಯಲ್ಲಿ ವಸತಿ ರಹಿತರಿಗೆ ಜಿ+2 ಮನೆಗಳನ್ನು ನಿರ್ಮಿಸಲು ಮಂಜೂರಾತಿ ನೀಡಿದ್ದು ಯಾವಾಗ; ಮನೆಗಳ ನಿರ್ಮಾಣ ಕಾಮಗಾರಿ ಆರಂಭಗೊಂಡಿದ್ದು ಯಾವಾಗ; | ಪ್ರಧಾನ ಮಂತ್ರಿ ಆವಾಸ್ ಹೌಸಿಂಗ್ ಫಾರ್ ಆಲ್ ಯೋಜನೆಯಡಿ ಚಿಕ್ಕಮಗಳೂರು ನಗರದಲ್ಲಿ ವಸತಿ ರಹಿತರಿಗೆ ವಸತಿ ಸೌಲಭ್ಯ ಕಲ್ಪಿಸುವ ಸಲುವಾಗಿ ಜಿ+2 ಮಾದರಿಯಲ್ಲಿ 1511 ಮನೆಗಳನ್ನು ನಿರ್ಮಾಣ ಮಾಡಲು ದಿನಾಂಕ:11.03.2020 ರಂದು ಮಂಜೂರಾತಿ ನೀಡಿದ್ದು, ನಿರ್ಮಾಣ ಕಾಮಗಾರಿಯ ಪ್ರದೇಶವನ್ನು ಹಸ್ತಾಂತರ ಪಡೆದು ದಿನಾಂಕ:12.08.2021 ರಂದು ಪ್ರಾರಂಭಿಸಲಾಗಿರುತ್ತದೆ. |
| ಆ) | ಈ ಮನೆ ಯಾವಾಗ ಪೂರ್ಣಗೊಳ್ಳಬೇಕಿತ್ತು; ಈವರೆಗೆ ಎಷ್ಟು ಮನೆಗಳು ಪೂರ್ಣಗೊಂಡಿವೆ; | ಕರಾರು ಒಪ್ಪಂದದ ಪ್ರಕಾರ ಕಾಮಗಾರಿಯು ದಿನಾಂಕ:11.08.2023 ರಂದು ಪೂರ್ಣಗೊಳ್ಳ ಬೇಕಿತ್ತು. ಈವರೆಗೂ 412 ಮನೆಗಳು ಪೂರ್ಣಗೊಂಡಿವೆ. |
| ಇ) | ಕಾಮಗಾರಿಯು ನಿಧಾನಗತಿಯಲ್ಲಿ ಸಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನಿಧಾನಗತಿಯಲ್ಲಿ ಸಾಗುತ್ತಿರುವುದಕ್ಕೆ ಕಾರಣಗಳೇನು; | ಹೌದು<br><br>ಮನೆಗಳ ನಿರ್ಮಾಣ ಕಾಮಗಾರಿ ವಿಳಂಬಕ್ಕೆ ಕಾರಣಗಳು ಈ ಕೆಳಕಂಡಂತಿವೆ:<br><br>1. ಯೋಜನಾ ಪ್ರದೇಶವು ಬೆಟ್ಟ ಗುಡ್ಡಗಳಿಂದ ಕಡಿದಾದ ಇಳಿಜಾರಿನಿಂದ ಕೂಡಿದ್ದರಿಂದ, ಸದರಿ ಪ್ರದೇಶವನ್ನು ಸಮತಟ್ಟಾಗಿ ಮಾಡುವಲ್ಲಿ ವಿಳಂಬ.<br>2. ಫಲಾನುಭವಿಗಳು ಸಕಾಲದಲ್ಲಿ ವಂತಿಕೆ ಪಾವತಿಸದೇ ಇರುವುದು. ಅವರುಗಳಿಗೆ ಬ್ಯಾಂಕ್‌ಗಳು ಸಕಾಲದಲ್ಲಿ ಸಾಲ ಮಂಜೂರು ಮಾಡದೇ ಇರುವುದು. ಇದರಿಂದಾಗಿ ಅನುದಾನದ ಕೊರತೆ ಉಂಟಾಗಿ ಕಾಮಗಾರಿಯಲ್ಲಿ ವಿಳಂಬ.<br>3. ಸದರಿ ಮನೆಗಳ ನಿರ್ಮಾಣ ಪ್ರದೇಶಕ್ಕೆ ಮೂಲಭೂತ ಸೌಕರ್ಯ ಒದಗಿಸಲು ಸಕಾಲದಲ್ಲಿ ನಗರ ಸ್ಥಳೀಯ ಸಂಸ್ಥೆಯು ಪಾಲಿನ ಮೊತ್ತ ಒದಗಿಸುವಲ್ಲಿ ವಿಳಂಬ. |
| ಈ) | ಈ ಮನೆಗಳ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು? | ಸದರಿ ಮನೆಗಳನ್ನು ಆದಷ್ಟು ಬೇಗನೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಮತ್ತು ಪೂರ್ಣಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:<br><br>ಸರ್ಕಾರವು ಯೋಜನೆಗಳನ್ನು ಪೂರ್ಣ ಗೊಳಿಸುವ ಉದ್ದೇಶದಿಂದ ಫಲಾನುಭವಿಗಳಿಗೆ ವಂತಿಕೆ ಮೊತ್ತವನ್ನು ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ಪಡೆಯಲು ಅನುಕೂಲವಾಗುವಂತೆ "Banklinkage" Software ಅನ್ನು ಸಿದ್ಧಪಡಿಸಲಾಗಿದೆ.<br><br>ರಾಜ್ಯಾದ್ಯಂತ ನಿರ್ಮಿಸಲಾಗುತ್ತಿರುವ ಗುಂಪು ಮನೆಗಳಲ್ಲಿ |

| | | |
|---|---|---|
| | | ಫಲಾನುಭವಿಗಳ ವಂತಿಗೆ (ಫಲಾನುಭವಿಗಳ ಪಾಲು ರೂ.1231 ಕೋಟಿ ಮತ್ತು ಮೂಲಸೌಕರ್ಯ ವೆಚ್ಚ ರೂ.319 ಕೋಟಿ ಸೇರಿದಂತೆ ಒಟ್ಟು ರೂ. 1,550 ಕೋಟಿ ಮೊತ್ತವನ್ನು ರಾಜ್ಯ ಸರ್ಕಾರದಿಂದಲೇ ಭರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.<br><br>ಕಾಮಗಾರಿಗಳ ಅನುಷ್ಠಾನದಲ್ಲಿನ ಅಡಚಣೆಗಳನ್ನು ಪರಿಹರಿಸುವ ಸಲುವಾಗಿ DUDC/ನಗರ ಸ್ಥಳೀಯ ಸಂಸ್ಥೆಗಳೊಂದಿಗೆ ವಾರಕ್ಕೊಮ್ಮೆ ಸಭೆ ನಡೆಸಲಾಗುತ್ತಿದೆ.<br><br>ಸದರಿ ಯೋಜನೆಗಳಡಿ SC/ST ಫಲಾನುಭವಿಗಳಿಗೆ ಅನುದಾನ ಒದಗಿಸುವಂತೆ ಸಮಾಜ ಕಲ್ಯಾಣ ಇಲಾಖೆಯನ್ನು ಕೋರಲಾಗಿದೆ. |

ಸಂಖ್ಯೆ: ವಇ 171 ಹೆಚ್‌ಎಫ್‌ಎ 2026]

(ಬಿ.ಜೆ.ಡ್ ಜಮೀರ್ ಅಹ್ಮದ್ ಖಾನ್)
ವಸತಿ ಸಚಿವರು.